

ಥವ ಥವ ಎಂದು ಹೊಡೆದುಕೊಳ್ಳಲಾರಂಭಿಸಿತು. ಈರಪ್ಪ ಇಂತಹ ಕದ್ದುಮುಚ್ಚಿ ಮಾಡುವ ಕೆಲಸಗಳಿಗೆ ಕೈಜೋಡಿಸುವ ಚಿಕ್ಕಣ್ಣ ಮತ್ತು ಮಾಸಣ್ಣನ ಸಹಾಯದಿಂದ ತನ್ನ ಹೊಲಮಾಳದ ಗುತ್ತಿಯ ಕಡೆಗೆ ಬಿಳಿಕುರಿಯನ್ನು ಮರೆಮಾಸಿಕೊಂಡು ಎಳೆದುಕೊಂಡುಹೋದ. ಅವನ ಬಲವಾದ ಕೈಗಳು ಬಿಳಿಕುರಿಯ ಬಾಯನ್ನು ಉಸಿರಾಡದಂತೆ ಅಮುಕಿಕೊಂಡಿದ್ದರಿಂದ ಅದು ಕೂಗಿಕೊಳ್ಳಲು ಅಸಮರ್ಥವಾಗಿತ್ತು. ಅಸಹಾಯಕವಾಗಿದ್ದ ಬಿಳಿಕುರಿ ಮಾತ್ರ ಅವನು ಎಳೆದುಕೊಂಡುಹೋದ ದಿಕ್ಕಿಗೆ ಹೋಯಿತು.

* * *

ಎಷ್ಟೊತ್ತಾದರೂ ಅಪ್ಪ ಯಾಕೆ ಕುರಿಗಳನ್ನು ಹೊಡೆದುಕೊಂಡು ಇನ್ನೂ ಬರಲಿಲ್ಲ ಎಂದು ಸಣ್ಣತಿಮ್ಮಯ್ಯ ಹಟ್ಟಿ ಉದಿಬಾಗಿಲಲ್ಲೇ ನಿಂತು ಪಡುವಲು ದಿಕ್ಕಿನೆಡೆಗೆ ಕಣ್ಣಾಚಿ ನೋಡುತ್ತಿದ್ದ. ಅಷ್ಟರಲ್ಲಿ ತಮ್ಮ ಪಾಲು ಬರುತ್ತಿರುವುದು ಕಂಡಿತು. ಕೆಂಪಗಿದ್ದ ಆ ಸಂಜೆಯ ದೂಳು ಕುರಿಗಳ ಕಾಲಿಗೆ ಸಿಕ್ಕಿ ಹೊಗೆಯಂತೆ ಮೇಲೇಳುತ್ತಿತ್ತು. ಅದರ ಮೇಲೆ ಕಾರೆಹಣ್ಣಿನಂತೆ ಕೆಂಪಾಗಿದ್ದ ಸೂರ್ಯನ ಬೆಳಕು ಬಿದ್ದು, ಆ ದೂಳು ಕೆಂಪು ಮಿಶ್ರಿತ ಬಂಗಾರದ ಹುಡಿಯಂತೆ ಕಾಣುತ್ತಿತ್ತು. ಕುರಿಮಂದೆಯ ಹಿಂದೆ ಬಿದಿರುಕೋಲು ಹಿಡಿದು ಬರುತ್ತಿದ್ದ ಗಿರಿಗೌಡನನ್ನು ಆ ಬಂಗಾರದ ಹುಡಿ ಇಡಿಯಾಗಿ ಆವರಿಸಿಕೊಂಡಿದ್ದರಿಂದ ಸಣ್ಣತಿಮ್ಮಯ್ಯನ ಕಣ್ಣಿಗೆ ಅಪ್ಪ ಬಂಗಾರದ ಪುತ್ಥಳಿಯಂತೆ ಕಂಡ. ಇಡೀ ದೃಶ್ಯವನ್ನು ಸಣ್ಣತಿಮ್ಮಯ್ಯ ಚೌಕಟ್ಟಿನ ಒಂದು ಚಿತ್ರವನ್ನು ನೋಡುವಂತೆ ಕ್ಷಣಕಾಲ ನೋಡುತ್ತಾ ನಿಂತ. ಆಗಲೇ ನಿಧಾನವಾಗಿ ಕತ್ತಲು ಹಟ್ಟಿಯ ಮೇಲೆ ಹೊದಿಕೆಯನ್ನು ಹೊದಿಸತೊಡಗಿತು. ಹಟ್ಟಿ ಮತ್ತು ಕುರಿಗೂಡುಗಳು ಮಬ್ಬಾಗತೊಡಗಿದವು.

'ಈಟೊತ್ತಿನ ತನಕ ಏನು ಮಾಡುತ್ತಿದ್ದೆ! ಈಗಲಾ ಬರೋದು?' ಎಂದು ಸಣ್ಣತಿಮ್ಮಯ್ಯ ಅಪ್ಪನನ್ನು ಪ್ರಶ್ನಿಸಿದ. 'ನಿಂದೊಳ್ಳೆ ಮಾತು ಕಣ್ಲ! ನಡಿ, ನಡಿ ಕತ್ತಲಾಯಿತು...' ಎಂದು ಗಿರಿಗೌಡ ಅವನ ಮುಂದೆಯೇ ಕುರಿಗಳನ್ನು ಹೊಡೆದುಕೊಂಡು ಗೂಡಿನತ್ತ ತಿರುಗಿದ.